

# ವೀನಸ್ ಅಲ್ಸರ್; ಸರ್ಜರಿಯ ಆನ್ಸರ್



ಡಾ. ವಿನಯ್ ನ್ಯಾಪಥಿ

**ವೆರಿಕೋಸ್ ವೇನ್ಸ್‌ನ ಕೊನೆಯ ಹಂತವಾದ ವೀನಸ್ ಅಲ್ಸರ್‌ನಿಂದ ಬಳಲುತ್ತಿದ್ದ 75 ವರ್ಷದ ಬಾಂಗ್ಲಾದೇಶದ ಮಹಿಳೆಗೆ ಶಸ್ತ್ರಚಿಕಿತ್ಸೆ ನಡೆಸಿ ಯಶಸ್ವಿಯಾಗಿದ್ದು, ಮಹಿಳೆ ಈಗ ಸರಾಗವಾಗಿ ನಡೆದಾಡುವಂತಾಗಿದೆ.**

■ ಉಮಾ ಅನಂತ್

ಬಾಂಗ್ಲಾ ದೇಶ ಡಾಕಾದ 75 ವರ್ಷದ ಮಹಿಳೆಯ ಕಾಲಿನ ರಕ್ತನಾಳಗಳಲ್ಲಿ ಹುಣ್ಣು ಬಾಧಿಸುತ್ತಿತ್ತು. ವೆರಿಕೋಸ್ ವೇನ್ಸ್‌ನ ಕೊನೆಯ ಹಂತವೇ ಆಗಿರುವ ವೀನಸ್ ಅಲ್ಸರ್‌ಗೆ ಒಳಗಾದ ಮಹಿಳೆ ಸಂಕಟ ಪಡುತ್ತಿದ್ದರು. ಬೆಂಗಳೂರಿನ ಕೋರಮಂಗಲದಲ್ಲಿರುವ ಅಪೋಲೊ ಸ್ಪೆಕ್ಟ್ರಾ ಆಸ್ಪತ್ರೆಯಲ್ಲಿ ಎಂಡೊವ್ಯಾಸ್ಕ್ಯುಲರ್ ಶಸ್ತ್ರಚಿಕಿತ್ಸೆಗೆ ಒಳಗಾದ ಮಹಿಳೆ ಈಗ ಸ್ವತಂತ್ರವಾಗಿ ನಡೆದಾಡುವಷ್ಟರ ಮಟ್ಟಿಗೆ ಚೇತರಿಸಿಕೊಂಡಿದ್ದಾರೆ.

ವೆರಿಕೋಸ್ ವೇನ್ಸ್‌ನಿಂದ ಬಳಲುತ್ತಿದ್ದ ಈ ಮಹಿಳೆಯ ಎಡಕಾಲು ಮತ್ತು ಪಾದದ ಮಣಿಕಟ್ಟಿನ ಭಾಗದಲ್ಲಿ ದೀರ್ಘಕಾಲದಿಂದ ಗುಣವಾಗದ ಗಾಯದಿಂದ ಬಹಳ ನೊಂದು ಬೆಂದಿದ್ದರು. ತನ್ನೂರಿನಲ್ಲಿ ಹಾಗೂ ಚೆನ್ನೈಯಲ್ಲಿ ಇದೇ ಕಾರಣಕ್ಕಾಗಿ ಹಲವಾರು ಬಾರಿ ರಕ್ತನಾಳಗಳ ಶಸ್ತ್ರಚಿಕಿತ್ಸೆಯನ್ನೂ ಮಾಡಿಸಿಕೊಂಡಿದ್ದರು. ಇದರಿಂದ ಯಾವ ಪ್ರಯೋಜನವನ್ನೂ ಕಾಣಲಿಲ್ಲ. ಮೇಲಾಗಿ ಈ ಭಾಗದಲ್ಲಿ ಬಹಳ ನೋವಿನಿಂದ ಕೂಡಿದ ಹುಣ್ಣುಗಳಾಗಿದ್ದವು. ಬಳಿಕ ಬೆಂಗಳೂರಿನ ಅಪೋಲೊ ಸ್ಪೆಕ್ಟ್ರಾ ಆಸ್ಪತ್ರೆಯಲ್ಲಿ ಈ ಬೇನೆಗೆ ಉತ್ತಮ ಚಿಕಿತ್ಸೆ ಲಭ್ಯ ಎಂಬುದನ್ನು ಅರಿತುಕೊಂಡ ಮಹಿಳೆ ಚಿಕಿತ್ಸೆಗಾಗಿ ಇಲ್ಲಿಗೆ ಬಂದಿದ್ದರು. ಈ ಕಾಯಿಲೆ ಪ್ರಕರಣವನ್ನು ಕೂಲಂಕಷವಾಗಿ

